## ಪ್ರಸ್ತುತ ತ್ರೈಮಾಸಿಕ ಹಂಗಾಮಿಗೆ ಕೃಷಿ ಮುನ್ಸೂಚನೆಗಳು

- ಹತ್ತಿ ಹೂ ಬಿಡುವ ಸಮಯದಲ್ಲಿ 25 ದಿವಸದ ಚೆಂಡು ಹೂವಿನ ಸಸಿಗಳನ್ನು ಹೊಲದ ಸುತ್ತಲೂ ನೆಡಬೇಕು.
- ಹತ್ತಿಯಲ್ಲಿ ಬಿತ್ತನೆಯಾದ 70–80 ದಿನಗಳ ನಂತರ ಕುಡಿ ಚಿವುಟುವುದರಿಂದ ಕಾಯಿ ಕೊರಕದ ಮೊಟ್ಟೆಗಳನ್ನು ನಾಶ ಮಾಡಬಹುದು ಹಾಗೂ ಸಸ್ಯ ಹೇನಿನ ಬಾಧೆಯನ್ನು ಕಡಿಮೆ ಮಾಡಬಹುದು.
- ಸೋಯಾಅವರೆಯಲ್ಲಿ ಪ್ರತಿಶತ 2ರ ಯೂರಿಯಾ ದ್ರಾವಣವನ್ನು ಸುಮಾರು 50 ರಷ್ಟು ಬೆಳೆ ಹೂವಾಡುವ ಹಂತದಲ್ಲಿ ಸಿಂಪರಣೆ ಮಾಡುವುದರಿಂದ ಇಳುವರಿಯನ್ನು ಹೆಚ್ಚಿಸಬಹುದು.
- ಶೇಂಗಾ ಬಿತ್ತಿದ 35–40 ದಿನಗಳ ನಂತರ ಕೊನೆಯ ಎಡೆಕುಂಟೆ ಹೊಡೆಯುವಾಗ ಪ್ರತಿ ಎಕರೆಗೆ 200 ಕೆ.ಜಿ. ಜಿಪ್ಸಂನ್ನು ಬೆಳೆಯ ಎರಡು ಸಾಲಿನ ಬದಿಗೆ (ಬಾರಂಗಿ ಬಿಡುವ) ಕೊಡುವುದು ಸೂಕ್ತ.
- ಮೆಕ್ಕೆಜೋಳ ಬೆಳೆಯುವ ಮಣ್ಣಿನಲ್ಲಿ ಸತುವಿನ ಅಂಶ ಕಡಿಮೆ ಇದ್ದಲ್ಲಿ ಪ್ರತಿ ಎಕರೆಗೆ 4 ಕೆ.ಜಿ. ಸತುವಿನ ಸಲ್ಫೇಟ್ ಗೊಬ್ಬರ ಕೊಡುವುದರಿಂದ ಪ್ರತಿ ಶತ 15–20 ರಷ್ಟು ಇಳುವರಿ ಹೆಚ್ಚಾಗುತ್ತದೆ.
- ಹೆಸರು ಬೆಳೆಯಲ್ಲಿ ಮೂತಿ ಹುಳದ ಬಾಧೆ ಕಂಡು ಬಂದಲ್ಲಿ ಪ್ರತಿ ಲೀಟರ್ ನೀರಿಗೆ 0.5 ಮಿ.ಲೀ. ಫೆನವಲರೇಟ್ ಅಥವಾ 2 ಮಿ.ಲೀ. ಕ್ವಿನಾಲ್ ಫಾಸ್ ಸಿಂಪಡಿಸಬೇಕು
- ಎಲೆಕೋಸಿನಲ್ಲಿ ದುಂಡಾಣು ಕಪ್ಪು ಕೊಳೆ ರೋಗದ ನಿರ್ವಹಣೆಗೆ ಪ್ರತಿ ಕೆ.ಜಿ. ಬೀಜಕ್ಕೆ 0.5 ಗ್ರಾಂ ಬ್ಯಾಕ್ಟೀರಿನಾಶಕ ಮತ್ತು 3.0 ಗ್ರಾಂ ತಾಮ್ರದ ಆಕ್ಸಿಕ್ಲೋರೈಡನ್ನು ಬೀಜೋಪಚಾರ ಮಾಡಬೇಕು. ಆದಾಗಿಯೂ ರೋಗವು ಕಂಡು ಬಂದರೆ ಪ್ರತಿ ಲೀಟರ್ ನೀರಿಗೆ 0.5 ಗ್ರಾಂ ಬ್ಯಾಕ್ಟೀರಿ ನಾಶಕ ಮತ್ತು 3.0 ಗ್ರಾಂ ತಾಮ್ರದ ಆಕ್ಸಿಕ್ಲೋರೈಡನ್ನು ಸೇರಿಸಿ ಸಿಂಪಡಿಸಬೇಕು. ಇದೇ ರೀತಿ 15 ದಿವಸಗಳ ಅಂತರದಲ್ಲಿ 2–3 ಸಾರಿ ಸಿಂಪರಣೆ ಮಾಡಬೇಕು.
- ಈರುಳ್ಳಿಯಲ್ಲಿ ನೇರಳೆ ಎಲೆ ಮಚ್ಚೆ ರೋಗ ಹಾಗೂ ಥ್ರಿಪ್ಸ್ ಕೀಟದ ಬಾಧೆಯಿಂದ ಎಲೆ ಒಣಗುವುದು ಕಂಡು ಬಂದಾಗ ಪ್ರತಿ ಲೀಟರ್ ನೀರಿಗೆ 1ಮಿ.ಲೀ. ಡೈಫೆನಕೋನೋಜೋಲ್ ಮತ್ತು 1.7ಮಿ.ಲೀ. ಡೈಮಿಥೋಯೇಟ್ ಬೆರಸಿ ಸಿಂಪಡಿಸಬೇಕು.
- ಮೆಣಸಿನಕಾಯಿ ಪ್ರತಿ ಕೆ.ಜಿ. ಬೀಜಕ್ಕೆ 10 ಗ್ರಾಂ ಇಮಿಡಾಕ್ಲೋಪ್ರಿಡ್‌ನಿಂದ ಬೀಜೋಪಚಾರ ಮಾಡಿ ಬಿತ್ತನೆ ಮಾಡುವುದರಿಂದ 40 ದಿನಗಳವರೆಗೆ ರಸ ಹೀರುವ ಕೀಟಗಳನ್ನು ತಡೆಗಟ್ಟಬಹುದು.


### ಸಂಪಾದಕರ ಮಂಡಳಿ

| | | |
|---|---|---|
| ಪ್ರಧಾನ ಸಂಪಾದಕರು | : | ಡಾ. ಬಿ. ಸಿ. ಹನುಮಂತಸ್ವಾಮಿ, ಡಾ. ಕೆ.ಕೆ. ಶಶಿಧರ್ |
| ಸಂಪಾದಕರು | : | ಡಾ. ಕೆ.ಬಿ. ಯಡಹಳ್ಳಿ, ಡಾ. ಸಿ. ಎಂ. ಸಜ್ಜನರ್, ಡಾ. ಎಸ್.ಎಂ. ಹಿರೇಮಠ ಶ್ರೀ ವೆಂಕಟೇಶ ಹೊಸಮನಿ, ಶ್ರೀ ಸಿ.ಕೆ. ಬೀರಜ್ಜನವರ |
| ಅಕ್ಷರ ಜೋಡಣೆ ಮತ್ತು ವಿನ್ಯಾಸ | : | ಕು. ರೇಖಾ ಕೆ.ಎನ್. |
| ಛಾಯಾಗ್ರಾಹಕ | : | ಶ್ರೀ. ಎಲ್. ಎಂ. ಮಹೇಶ |
| ಪ್ರಕಾಶಕರು | : | ಡಾ. ಎಂ.ವ್ಹಿ. ನಾಗರಾಜ, ಕಾರ್ಯಕ್ರಮ ಸಂಯೋಜಕರು, ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿ |


ಮುದ್ರಿತ ವಿಷಯ


ಇಂದ:
**ಕಾರ್ಯಕ್ರಮ ಸಂಯೋಜಕರು**
ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿ-581 135
ತಾ|| ರಾಣೇಬೆನ್ನೂರು, ಜಿ|| ಹಾವೇರಿ,
ದೂರವಾಣಿ:08373-253524, 9448495338
E-mail: kvk_haveri@rediffmail.com
Website :www.kvkhaveri.org
(ನಿಮ್ಮ ಅನಿಸಿಕೆಗಳನ್ನು ಈ ವಿಳಾಸಕ್ಕೆ ಕಳುಹಿಸಿ)


ಗೆ,

ಪಿನ್ ಕೋಡ್


ಕೃಷಿ ವಿಶ್ವವಿದ್ಯಾಲಯ, ಧಾರವಾಡ

# ವಾರ್ತಾ ಪತ್ರಿಕೆ

ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿ

Website: www. kvkhaveri.org    Email:kvk_haveri@rediffmail.com

ಏಪ್ರಿಲ್-ಜೂನ್, 2008    ಸಂಪುಟ-4    ಸಂಚಿಕೆ-2


## ಪರಿವಿಡಿ


- ವೃತ್ತಿಪರ ತರಬೇತಿ
- ಕೃಷಿ ಆಂದೋಲನ
- ಕ್ಷೇತ್ರೋತ್ಸವ
- ತರಬೇತಿ ಕಾರ್ಯಕ್ರಮಗಳು
- ಬಾನುಲಿ ಕಾರ್ಯಕ್ರಮಗಳು
- ಪ್ರಸಕ್ತ ಸಾಲಿನ ಕ್ಷೇತ್ರ ಮರುಪರಿಶೀಲನೆಗಳು
- ಚಾಲ್ತಿಯಲ್ಲಿರುವ ಪ್ರಥಮ ಹಂತದ ಪ್ರಾತ್ಯಕ್ಷಿಕೆಗಳು
- ತ್ರೈಮಾಸಿಕದಲ್ಲಿ ಕೈಗೊಳ್ಳಲಿರುವ ಕಾರ್ಯಕ್ರಮಗಳು
- ಪ್ರಸ್ತುತ ತ್ರೈಮಾಸಿಕ ಹಂಗಾಮಿಗೆ ಕೃಷಿ ಮುನ್ಸೂಚನೆಗಳು


## ಸಂಪಾದಕೀಯ

ರೈತರು ಸ್ವಾವಲಂಬಿಗಳಾಗಿ ಆರ್ಥಿಕ ಮಟ್ಟ ಸುಧಾರಣೆಯಾಗ ಬೇಕಾದರೆ ಕೃಷಿಯಲ್ಲಿ ನವೀನ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳಬೇಕು. ಸುಧಾರಿತ ತಳಿ / ಬೆಳೆಗಳ ಆಯ್ಕೆ, ಸಮಯಕ್ಕೆ ಸರಿಯಾಗಿ ಬಿತ್ತನೆ, ಸಮಗ್ರ ಪೋಷಕಾಂಶಗಳ ನಿರ್ವಹಣೆ ಹಾಗೂ ಪೀಡೆ ನಿರ್ವಹಣಾ ಕ್ರಮಗಳನ್ನು ಸರಿಯಾಗಿ ಅನುಸರಿಸಬೇಕು. ಇಲ್ಲದಿದ್ದರೆ ಲಾಭಕ್ಕಿಂತ ಖರ್ಚು ಹೆಚ್ಚಾಗಿ ಸಂಕಷ್ಟಕ್ಕೀಡಾಗಬೇಕಾಗುತ್ತದೆ. ಕೆಲವು ವೇಳೆ ವಾತಾವರಣದ ವೈಪರೀತ್ಯದಿಂದಾಗಿ ಬೆಳೆದ ಬೆಳೆ ಕೈ ಸೇರದೆ ಅನೇಕ ಸಾಮಾಜಿಕ ಸಮಸ್ಯೆಗಳು ಎದುರಾಗುತ್ತವೆ. ಹವಾಮಾನದ ಬದಲಾದ ಪರಿಸ್ಥಿತಿಯಲ್ಲಿ ಬದಲಾವಣೆ ಬೆಳೆಗಳನ್ನು ಕೈಗೊಳ್ಳಲು ರೈತರು ತಜ್ಞರೊಡನೆ ಚರ್ಚಿಸಿ ಸೂಕ್ತ ಸಲಹೆ ಸೂಚನೆಗಳನ್ನು ಪಡೆಯಬೇಕು. ಕೃಷಿ ವಿಜ್ಞಾನ ಕೇಂದ್ರವು ಹಮ್ಮಿಕೊಳ್ಳುವ ಎರೆಹುಳು ಗೊಬ್ಬರ ಉತ್ಪಾದನಾ ತಾಂತ್ರಿಕತೆ, ತೋಟಗಾರಿಕೆ ಸಸ್ಯಗಾರ, ಸುಧಾರಿತ ಹೈನುಗಾರಿಕೆಯಂತಹ ವೃತ್ತಿಪರ ತರಬೇತಿ ಕಾರ್ಯಕ್ರಮಗಳಲ್ಲಿ ರೈತರು ಭಾಗವಹಿಸಿ ತಾಂತ್ರಿಕತೆಯನ್ನು ಪಡೆದು ಸ್ವ-ಉದ್ಯೋಗಿಗಳಾಗು ವುದರಿಂದ ಆರ್ಥಿಕವಾಗಿ ಸಬಲರಾಗಬಹುದು. ವಿವಿಧ ಹಂಗಾಮಿನಲ್ಲಿ ಕೈಗೊಳ್ಳುವ ಕೃಷಿ ಚಟುವಟಿಕೆಗಳ ಬಗ್ಗೆ ರೈತರಿಗೆ ಸಲಹೆ ಸೂಚನೆಗಳನ್ನು ನೀಡುವ ಸಲುವಾಗಿ ಕೃಷಿ ವಿಜ್ಞಾನ ಕೇಂದ್ರವು ಕೃಷಿ ಆಂದೋಲನವನ್ನು ಹಮ್ಮಿಕೊಳ್ಳುತ್ತಾ ಬಂದಿದೆ.

**ಬಿತ್ತಿದ್ದನ್ನು ಬೆಳೆದುಕೋ**
*ಬೀಜ ಒಂದಾದರೆ ಫಲ ಒಂದೇ?*
**ಬೆಳೆದರೆ ಉಳಿವು, ಇಲ್ಲದಿದ್ದರೆ ಅಳಿವು**
–ರೈತಜ್ಞ

**ಕೃಷಿ ಮಾಹಿತಿಗಾಗಿ 1551 ಸಂಪರ್ಕಿಸಿ**

## ವೃತ್ತಿಪರ ತರಬೇತಿ

ತೋಟಗಾರಿಕೆ ಸಸ್ಯಗಾರ ನಿರ್ವಹಣೆ



ಸುಧಾರಿತ ಹೈನುಗಾರಿಕೆ



"ತೋಟಗಾರಿಕೆ ಸಸ್ಯಗಾರ ನಿರ್ವಹಣೆ" ಮತ್ತು "ಸುಧಾರಿತ ಹೈನುಗಾರಿಕೆ"ಯ 6 ದಿನಗಳ ವೃತ್ತಿ ಪರ ತರಬೇತಿಯನ್ನು ಕೃಷಿ ವಿಜ್ಞಾನ ಕೇಂದ್ರ ಮತ್ತು ರೂಡ ಸಂಸ್ಥೆ, ರಟ್ಟೀಹಳ್ಳಿ ಇವರ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಲಾಗಿತ್ತು. ಈ ತರಬೇತಿಯಲ್ಲಿ 19 ಜನ ರೈತ ಮಹಿಳಾ ಫಲಾನುಭವಿಗಳು ಭಾಗವಹಿಸಿ ಕಾರ್ಯಕ್ರಮದ ಸದುಪಯೋಗ ಪಡೆದುಕೊಂಡರು.

## ಕೃಷಿ ಆಂದೋಲನ

ಸವಣೂರು ತಾಲೂಕಿನ ಮಾದಾಪುರ ಗ್ರಾಮದಲ್ಲಿ, ಬೈಫ್ ಸಂಸ್ಥೆ ಸಹಯೋಗದೊಂದಿಗೆ ಮುಂಗಾರು ಕೃಷಿ ಆಂದೋಲನವನ್ನು ದಿನಾಂಕ 11.06.2008ರಲ್ಲಿ ಕೈಗೊಳ್ಳಲಾಯಿತು. ಈ ಕಾರ್ಯಕ್ರಮದಲ್ಲಿ ಸಾವಯವ ಪದ್ಧತಿಯಿಂದ ಬೆಳೆಗಳನ್ನು ಬಾಧಿಸುವ ಕೀಟ ಹಾಗೂ ರೋಗಗಳ ನಿರ್ವಹಣೆ, ಸಾವಯವ ತೋಟಗಾರಿಕೆ, ಸುಧಾರಿತ ಹೈನುಗಾರಿಕೆ, ಎರೆಹುಳು ಗೊಬ್ಬರ ಉತ್ಪಾದನಾ ತಾಂತ್ರಿಕತೆ ಹಾಗೂ ಕೃಷಿ ಮುಂಗಾರು ಹಂಗಾಮಿನಲ್ಲಿ ಕೈಗೊಳ್ಳಲಿರುವ ವಿವಿಧ ಕೃಷಿ ಚಟುವಟಿಕೆಗಳ ಬಗ್ಗೆ ಕೇಂದ್ರದ ವಿಜ್ಞಾನಿಗಳು ರೈತರಿಗೆ ಸಲಹೆ ಸೂಚನೆಗಳನ್ನು ನೀಡಿದರು.



ಕೃ.ವಿ.ಕೇ. ಹನುಮನಮಟ್ಟಿ ವಾರ್ತಾ ಪತ್ರಿಕೆ, ಏಪ್ರಿಲ್–ಜೂನ್, 2008

## ಕ್ಷೇತ್ರೋತ್ಸವ

### ಶೇಂಗಾ(ಜಿ.ಪಿ.ಬಿ.ಡಿ–4) ಬೆಳೆ



ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿ ವತಿಯಿಂದ ಪ್ರಥಮ ಹಂತದ ಪ್ರಾತ್ಯಕ್ಷಿಕೆ ಅಡಿಯಲ್ಲಿ ಬ್ಯಾಡಗಿ ತಾಲೂಕಿನ ಹೊಸಶಿಡೇನೂರ ಗ್ರಾಮದಲ್ಲಿ ಶೇಂಗಾ (ಜಿ.ಪಿ.ಬಿ.ಡಿ.–4) ಬೆಳೆಯ ಕ್ಷೇತ್ರೋತ್ಸವವನ್ನು ದಿನಾಂಕ 28.04.2008 ರಂದು ಪ್ರಗತಿ ಪರ ರೈತರಾದ ಶ್ರೀ ಈರಣ್ಣಗೌಡ ಫಕೀರಗೌಡ ಪಾಟೀಲ್ ಇವರ ಜಮೀನಿನಲ್ಲಿ ಏರ್ಪಡಿಸಲಾಗಿತ್ತು. ಧಾರವಾಡ ಕೃಷಿ ವಿಶ್ವವಿದ್ಯಾಲಯದ ಸಹ ವಿಸ್ತರಣಾ ನಿರ್ದೇಶಕರಾದ ಡಾ.ಆರ್.ಎ. ಬೂದಿಹಾಳರವರು ಕ್ಷೇತ್ರೋತ್ಸವವನ್ನು ಉದ್ಘಾಟಿಸಿ, ರೈತರು ಹೊಸ ತಾಂತ್ರಿಕತೆಗಳನ್ನು ಅಳವಡಿಸಿಕೊಂಡು, ಹೆಚ್ಚಿನ ಇಳುವರಿ ಪಡೆದು ಆರ್ಥಿಕ ಹಾಗೂ ಸಾಮಾಜಿಕವಾಗಿ ಅಭಿವೃದ್ಧಿ ಹೊಂದಬೇಕೆಂದು ಕರೆ ನೀಡಿದರು. ಅಥಿತಿಗಳಾಗಿ ಆಗಮಿಸಿದ್ದ ಪ್ರಗತಿಪರ ರೈತರಾದ ಶ್ರೀ ಪಿ.ಎಸ್. ಮಲ್ಲಾಡದ ಅವರು ಮಾತನಾಡುತ್ತ, ಕೃಷಿ ವಿಜ್ಞಾನ ಕೇಂದ್ರವು ಹೊಸ ತಾಂತ್ರಿಕತೆಗಳನ್ನು ಸಾಧ್ಯವಾದಷ್ಟು ಬೇಗ ಗ್ರಾಮಮಟ್ಟದಲ್ಲಿ ರೈತರಿಗೆ ತಲುಪಿಸಲು ಕಾರ್ಯಕ್ರಮಗಳನ್ನು ಹಾಕಿಕೊಳ್ಳುವಂತೆ ಮನವಿ ಮಾಡಿದರು. ಈ ಕ್ಷೇತ್ರೋತ್ಸವದಲ್ಲಿ ಕೇಂದ್ರದ ವಿಜ್ಞಾನಿಗಳು ಹಾಗೂ ಕೃಷಿ ಇಲಾಖೆ ಅಧಿಕಾರಿಗಳು ಮತ್ತು ಸುತ್ತಮುತ್ತಲಿನ ಗ್ರಾಮದ ಪ್ರಗತಿಪರ ರೈತರು ಮತ್ತು ರೈತ ಮಹಿಳೆಯರು ಸಕ್ರೀಯವಾಗಿ ಭಾಗವಹಿಸಿದ್ದರು.

### ಶೇಂಗಾ (ಡಿ.ಹೆಚ್–86) ಬೆಳೆ



ಪ್ರಥಮ ಹಂತದ ಪ್ರಾತ್ಯಕ್ಷಿಕೆ ಅಡಿಯಲ್ಲಿ ರಾಣೇಬೆನ್ನೂರು ತಾಲೂಕಿನ ಕಜ್ಜರಿ ಗ್ರಾಮದಲ್ಲಿ ಶೇಂಗಾ(ಡಿ.ಹೆಚ್.–86) ಬೆಳೆಯ ಕ್ಷೇತ್ರೋತ್ಸವವನ್ನು ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿ ವತಿಯಿಂದ ದಿನಾಂಕ 06.05.2008 ರಂದು ಪ್ರಗತಿ ಪರ ರೈತರಾದ ಶ್ರೀ ರಮೇಶ ಜಿ. ಲಮಾಣಿ ಇವರ ಜಮೀನಿನಲ್ಲಿ ಏರ್ಪಡಿಸಲಾಗಿತ್ತು.ಕೃಷಿ ಇಲಾಖೆ ಅಧಿಕಾರಿಗಳು ಹಾಗೂ ಕಜ್ಜರಿ ಗ್ರಾಮದ ವ್ಯವಸಾಯ ಸೇವಾ ಸಹಕಾರಿ ಬ್ಯಾಂಕ್‌ನ ಅಧ್ಯಕ್ಷರಾದ ಶ್ರೀ ಗುಡ್ಡಪ್ಪ ಕೆರೆಮಲ್ಲಣ್ಣನವರ್, ಅತಿಥಿಗಳಾಗಿ ಭಾಗವಹಿಸಿದ್ದರು. ಈ ಕ್ಷೇತ್ರೋತ್ಸವದಲ್ಲಿ ಕೇಂದ್ರದ ವಿಜ್ಞಾನಿಗಳು ಭಾಗವಹಿಸಿ ಅಗತ್ಯ ಸಲಹೆ ಸೂಚನೆಗಳನ್ನು ನೀಡಿದರು. ಕಾರ್ಯಕ್ರಮದಲ್ಲಿ ಸುಮಾರು 60 ಜನ ರೈತರು ಭಾಗವಹಿಸಿದ್ದರು.

## ತರಬೇತಿ ಕಾರ್ಯಕ್ರಮಗಳು



ಜೇನು ಸಾಕಾಣಿಕೆ



ಉದ್ಯಮಶೀಲತಾ ಅಭಿವೃದ್ಧಿ



ಎರೆಹುಳು ಗೊಬ್ಬರ ಉತ್ಪಾದನಾ ತಾಂತ್ರಿಕತೆ



ಸಾವಯವ ಕೃಷಿ

## ಬಾನುಲಿ ಕಾರ್ಯಕ್ರಮಗಳು

| ವಿಷಯ | ದಿನಾಂಕ | ಸ್ಥಳ |
|---|---|---|
| ನಾಟಿ ಪದ್ಧತಿಯಲ್ಲಿ ತೊಗರಿ ಬೆಳೆ ಬೇಸಾಯ | 09.04.2008 | ಆಕಾಶವಾಣಿ, ಧಾರವಾಡ |
| ಗೃಹಮಟ್ಟದಲ್ಲಿ ಜೇನು ಸಾಕಾಣಿಕೆ | 12.05.2008 | ಆಕಾಶವಾಣಿ, ಧಾರವಾಡ |
| ಪ್ರಮುಖ ತೋಟಗಾರಿಕಾ ಬೆಳೆಗಳ ಸಾಗುವಳಿ ಕ್ರಮಗಳು | 22.05.2008 | ಆಕಾಶವಾಣಿ, ಧಾರವಾಡ |

## ಪ್ರಸಕ್ತ ಸಾಲಿನ ಕ್ಷೇತ್ರ ಮರುಪರಿಶೀಲನೆಗಳು

| ವಿಷಯ | ಪ್ರಯೋಗಗಳ ಸಂಖ್ಯೆ |
|---|---|
| ಬದನೆ ಬೆಳೆಯ ಅಧಿಕ ಇಳುವರಿಗೆ ಸೂಕ್ತ ಅಂತರ ನಿರ್ವಹಣೆ | 05 |
| ಮುಂಗಾರು ಹಂಗಾಮಿಗೆ ಸೂಕ್ತವಾಗುವಂತಹ ಮೆಕ್ಕೆಜೋಳದ ತಳಿಗಳ ಪರಿಷ್ಕರಣೆ | 03 |
| ಪಪ್ಪಾಯಿ ಬೆಳೆಯಲ್ಲಿ ಬೇರು ಕೊಳೆ ರೋಗದ ನಿರ್ವಹಣೆ | 04 |
| ಎಮ್ಮೆ ಕರುಗಳಲ್ಲಿ ಜಂತು ಹುಳುಗಳ ನಿರ್ವಹಣೆ | 50 |

## ಚಾಲ್ತಿಯಲ್ಲಿರುವ ಪ್ರಥಮ ಹಂತದ ಪ್ರಾತ್ಯಕ್ಷಿಕೆಗಳು

| ಬೆಳೆ/ ತಳಿ | ಕ್ಷೇತ್ರ (ಹೆ.) | ಫಲಾನುಭವಿಗಳು |
|---|---|---|
| ಶೇಂಗಾ (ಜಿ.ಪಿ.ಬಿ.ಡಿ.–4) | 10 | 25 |
| ಸೂರ್ಯಕಾಂತಿ (ಕೆ.ಬಿ.ಎಸ್.ಹೆಚ್.–41) | 10 | 25 |
| ಸೋಯಾ ಅವರೆ (ಜೆ.ಎಸ್.–335) | 10 | 25 |
| ಎಳ್ಳು (ಡಿ.ಎಸ್.ಎಸ್–9) | 05 | 12 |
| ಉದ್ದು (ಡಿ.ಯು–1) | 10 | 25 |
| ತೊಗರಿ (ಆಶಾ) | 10 | 25 |
| ಹೆಸರು (ಎಸ್–4) | 10 | 25 |
| ಹತ್ತಿ (ಆರ್.ಸಿ.ಹೆಚ್.–20–ಬಿ.ಟಿ) | 10 | 25 |
| ಸಾವೆ(ಸುಕ್ಷೇಮ) | 10 | 25 |
| ನವಣೆ(ಹೆಚ್.ಎಂ.ಟಿ–100–01) | 10 | 25 |
| ಮೆಕ್ಕೆ ಜೋಳದಲ್ಲಿ 50 ಕೆ.ಜಿ. ಎರೆಹುಳುಗೊಬ್ಬರದೊಂದಿಗೆ 25 ಕೆ.ಜಿ. ಫೆರಸ್ ಸಲ್ಫೇಟ್/ಹೆ | 02 | 05 |
| ಟೊಮ್ಯಾಟೊ – ನಂಜಾಣು ರೋಗದ ನಿರ್ವಹಣೆ | 02 | 05 |
| ಅಧಿಕ ಇಳುವರಿ ಕೊಡುವ ನೂತನ ಹೈಬ್ರೀಡ್ ಟೊಮ್ಯಾಟೋ (ಡಿ.ಎಂ.ಟಿ–2) | 04 | 10 |
| ತರಕಾರಿ ಬೆಳೆಗಳಲ್ಲಿ ಲಘು ಪೋಷಕಾಂಶಗಳ ನಿರ್ವಹಣೆ | 05 | 12 |
| ಬಾಳೆಯಲ್ಲಿ ಪೋಷಕಾಂಶಗಳ ನಿರ್ವಹಣೆ | 05 | 12 |
| ಅಧಿಕ ಇಳುವರಿ ಮತ್ತು ಆಕರ್ಷಕ ಬಣ್ಣದ ಆ್ಯಸ್ಟರ್ ತಳಿ ಪರಿಚಯ (ಪಿ.ಜಿ. ವೈಲೆಟ್) | 02 | 05 |
| ಅಧಿಕ ಇಳುವರಿ ಮತ್ತು ರೋಗ ನಿರೋಧಕ ಉಳ್ಳಾಗಡ್ಡೆ (ಅರ್ಕಾಕಲ್ಯಾಣ) ತಳಿ ಪರಿಚಯ | 02 | 05 |
| ಅಧಿಕ ಇಳುವರಿ ಮತ್ತು ಆಕರ್ಷಕ ಬಣ್ಣದಚೆಂಡು ಹೂ– ತಳಿ ಪರಿಚಯ | 04 | 10 |
| ತೆಂಗು, ಬಾಳೆ ಮತ್ತು ವೇಲ್ವೆಟ್ ಬೀನ್ ಬಹು ಮಹಡಿ ಪದ್ಧತಿಯ ಬೇಸಾಯ | 04 | 10 |
| ಕೃಷಿ – ತೋಟಗಾರಿಕೆ – ಅರಣ್ಯ ಪದ್ಧತಿ ಮಾದರಿ ಪರಿಚಯ | 01 | 03 |
| ಅಧಿಕ ಇಳುವರಿ ಮತ್ತು ಪರಿಶುದ್ಧ ಮೆಣಸಿನಕಾಯಿ ತಳಿ ಪರಿಚಯ | 05 | 10 |
| ಸೇವಂತಿಗೆಯಲ್ಲಿ ಪೋಷಕಾಂಶಗಳ ನಿರ್ವಹಣೆ | 05 | 12 |
| ಮಾವಿನಲ್ಲಿ ಫಲಪುಷ್ಪ ಸಂರಕ್ಷಣೆ | 02 | 05 |
| ಸಿಹಿ ಜೋಳವನ್ನು (ಎಸ್.ಎಸ್. ವ್ಹಿ–74) ಪಶು ಆಹಾರವಾಗಿ ಬಳಕೆ | 05 | 12 |
| ಹೈನು ದನಗಳಿಗೆ ಅಝೋಲವನ್ನು ಪಶು ಆಹಾರವಾಗಿ ಬಳಸುವಿಕೆ | 00 | 03 |

## ತ್ರೈಮಾಸಿಕದಲ್ಲಿ ಕೈಗೊಳ್ಳಲಿರುವ ಕಾರ್ಯಕ್ರಮಗಳು

**1. ಡಾ|| ಎಂ.ಹೆಚ್. ಮರೀಗೌಡರ ಜನ್ಮ ದಿನಾಚರಣೆ**

**2. ಹತ್ತಿ ಬೆಳೆಯ ರೈತರ ಕ್ಷೇತ್ರ ಪಾಠ ಶಾಲೆ**

**3. ತರಬೇತಿಗಳು**

- ಗ್ರಾಮ ತೋಟಗಾರಿಕೆ
- ರೇಷ್ಮೆ ಹುಳು ಸಾಕಾಣಿಕೆ
- ಮೊಲ ಸಾಕಾಣಿಕೆ
- ತೊಗರಿ ಬೆಳೆಯ ರೋಗಗಳ ನಿರ್ವಹಣೆ
- ಸುಧಾರಿತ ಆ್ಯಸ್ಟರ್ ಹೂವಿನ ಉತ್ಪಾದನಾ ತಾಂತ್ರಿಕತೆ
- ಸೂರ್ಯಕಾಂತಿ ಮತ್ತು ಶೇಂಗಾ ಬೆಳೆಯ ನಂಜಾಣು ರೋಗದ ನಿರ್ವಹಣೆ
- ಎರೆಹುಳು ಗೊಬ್ಬರ ಉತ್ಪಾದನಾ ತಾಂತ್ರಿಕತೆ
- ಬೆಳೆ ಉತ್ಪಾದನೆಯಲ್ಲಿ ಜೇನು ನೊಣಗಳ ಪಾತ್ರ
- ಶುದ್ಧ ಹಾಲಿನ ಉತ್ಪಾದನಾ ತಾಂತ್ರಿಕತೆ
- ಸುಧಾರಿತ ಮೆಣಸಿನಕಾಯಿ ಉತ್ಪಾದನಾ ತಾಂತ್ರಿಕತೆ
- ಕೃಷಿಯಲ್ಲಿ ಉದ್ಯೋಗ ಅವಕಾಶಗಳು
- ಕೃಷಿಯಲ್ಲಿ ಸ್ವಸಹಾಯ ಸಂಘಗಳ ಪಾತ್ರ